## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS**- 477/2023 ಡಿ ಡಬ್ಲ್ಯೂ-1

**ದಿಃ 11.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ZKT ವಕೀಲರಿಂದಃ**

ನಾನು ಈ ದಾವೆಯಲ್ಲಿ 2 ನೇ ಪ್ರತಿವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

ನಾನು ನನ್ನ ತಕರಾರಿಗೆ ಸಂಬಂಧಿಸಿದಂತೆ ಶಿವಬಾಯಿ ವೀರಭದ್ರಪ್ಪ ಕುರಗುಂದ ಇವರ ಮರಣ ಪ್ರಮಾಣ ಪತ್ರವನ್ನು ಹಾಜರಪಡಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಡಿ 4 ಎಂದು, ವೀರಭದ್ರಪ್ಪ ಮಡಿವಾಳಪ್ಪ ಕುರಗುಂದ ಇವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಡಿ 5 ಎಂದು, ಹೋಮ್ ಲೋನ ಆಗ್ರಿಮೆಂಟನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಡಿ 6 ಎಂದು, ಸ್ಟೆಟಮೆಂಟ ಆಫ ಅಕೌಂಟನ ದೃಢೀಕೃತ ನಕಲನ್ನು ನಿಶಾನೆ ಡಿ 7 ಎಂದು, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯವರು ನೀಡಿರುವ ಕಟ್ಟಡ ಪರವಾನಿಗೆಯ ದೃಢೀಕೃತ ನಕಲನ್ನು ನಿಶಾನೆ ಡಿ 8 ಎಂದು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯವರು ನೀಡಿರುವ ಕಟ್ಟಡ ಅನುಬೋಗ ಪ್ರಮಾಣ ಪತ್ರವನ್ನು ನಿಶಾನೆ ಡಿ 9 ಎಂದು, ಪ್ಲಾನಿನ ದೃಢೀಕೃತ ನಕಲನ್ನು ನಿಶಾನೆ ಡಿ 10 ಎಂದು, ಇ-ಸ್ವತ್ತಿನ ದೃಢೀಕೃತ ನಕಲನ್ನು ನಿಶಾನೆ ಡಿ 11 ಎಂದು, ಆಸ್ತಿ ತೆರಿಗೆ ವಿವರ ಪಟ್ಟಿಯಯನ್ನು ನಿಶಾನೆ ಡಿ 12 ಎಂದು, ಕಂದಾಯ ಪಾವತಿ ರಶೀದಿಯನ್ನು ನಿಶಾನೆ ಡಿ 13 ಎಂದು, ದಿಃ13-06-1972 ರ ಕ್ರಯ ಪತ್ರದ ದೃಢೀಕೃತ ನಕಲನ್ನು ನಿಶಾನೆ ಡಿ 14 ಎಂದು, ಬಕ್ಷಿಸ ಪತ್ರದ ದೃಢೀಕೃತ ನಕಲನ್ನು ನಿಶಾನೆ ಡಿ 15 ಎಂದು, ಮ್ಯೂಟೇಶನ ರಜಿಸ್ಟರ ಪ್ರತಿಯ ದೃಢೀಕೃತ ನಕಲು ಒಟ್ಟು 4 ಪುಟಗಳನ್ನು ಒಳಗೊಂಡಂತೆ ನಿಶಾನೆ ಡಿ 16 ಎಂದು, ದಿಃ13-06-1972 ರ ಮೂಲ ಖರೀದಿ ನೊಂದಣಿ ಪತ್ರವನ್ನು ನಿಶಾನೆ ಡಿ 17 ಎಂದು, ದಿಃ05-05-2015 ರ ಎರಡು ನೊಂದಣಿ ಖರೀದಿ ಪತ್ರಗಳನ್ನು ನಿಶಾನೆ ಡಿ 18 ಮತ್ತು ನಿಶಾನೆ ಡಿ 19 ಎಂದು, ದಿಃ31-07-2014



ರ ನೊಂದಣಿ ಖರೀದಿ ಪತ್ರದೊಂದಿಗೆ ಸಮ್ಮತಿ ಪತ್ರವನ್ನು ಒಳಗೊಂಡಂತೆ ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಡಿ 20 ಎಂದು, ದಿಃ24-12-2014 ರ ನೊಂದಣಿ ಖರೀದಿ ಪತ್ರವನ್ನು

ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಡಿ 21 ಎಂದು, ಸರ್ವೆ ನಂಬರ 4 ಆ ಯರಿಬೂದಿಹಾಳ ಗ್ರಾಮದ 2016–2017 ನೇ ಸಾಲಿನ ಎರಡು ಪುಟದ ಪಹಣಿ ಪತ್ರಿಕೆಯನ್ನು ಹಾಜರುಪಡಿಸದ್ದು ನಿಶಾನೆ ಡಿ 22 ಎಂದು, ಸರ್ವೆ ನಂಬರ 4*/ಆ/4 ಯರಿಬೂದಿಹಾಳ ಗ್ರಾಮದ 2016–2017 ನೇ ಸಾಲಿನ ಆರು ಪುಟದ ಪಹಣಿ ಪತ್ರಿಕೆಯನ್ನು ಹಾಜರುಪಡಿಸದ್ದು ನಿಶಾನೆ ಡಿ 23 ಎಂದು, ಲಿಂಗರಾಜ ಕುರಗುಂದ ಇವರು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ ಯರಿಬೂದಿಹಾಳ ಶಾಖೆಯವರು ನೀಡಿರುವ ರಶೀದಿಯನ್ನು ನಿಶಾನೆ ಡಿ 24 ಎಂದು, pension payment order ನ್ನು ನಿಶಾನೆ ಡಿ 25 ಎಂದು, specimen signature document ನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಡಿ 26 ಎಂದು, ದಿಃ17–07–2002 ರಂದು district treasury ರವರು ಕೆನರಾ ಬ್ಯಾಂಕಿಗೆ ನೀಡಿರುವ ದಾಖಲೆಯನ್ನು ನಿಶಾನೆ ಡಿ 27 ಎಂದು, ಶಿವಬಾಯಿ ಕುರುಗುಂದ ಇವರು ನೀಡಿರುವ ದೂರು ಪ್ರಮಾಣ ಪತ್ರ ಹಾಗೂ ಕೇಶ್ವಾಪೂರ ಪೋಲೀಸರು ನೀಡಿರುವ ಸ್ವೀಕೃತಿ ಇವುಗಳನ್ನು ಒಳಗೊಂಡು ನಿಶಾನೆ ಡಿ 28 ಎಂದು, ಪತ್ರಿಕಾ ಪ್ರಕಟಣೆ ನಿಶಾನೆ ಡಿ 29 ಎಂದು, ದಿಃ01–12–1992 ರ ಕ್ರಯ ಪತ್ರದ ದೃಢೀಕೃತ ನಕಲನ್ನು ನಿಶಾನೆ ಡಿ 30 ಎಂದು, ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ ಇವರು ನೀಡಿರುವ ಪಾಸ ಪುಸ್ತಕವನ್ನು ನಿಶಾನೆ ಡಿ 31 ಎಂದು, ಕೆನರಾ ಬ್ಯಾಂಕನವರು ನೀಡಿರುವ ಎರಡು ಪಾಸ ಪುಸ್ತಕಗಳನ್ನು ನಿಶಾನೆ ಡಿ 32 ಮತ್ತು ನಿಶಾನೆ ಡಿ 33 ಎಂದು, ಒಟ್ಟು 4 ಪುಟದ ಮ್ಯೂಟೇಶನ ಪ್ರತಿಯ ದೃಢೀಕೃತ ನಕಲ್ನು ನಿಶಾನೆ ಡಿ 34 ಎಂದು ಗುರ್ತಿಸಲಾಯಿತು.

**ವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು)**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ